# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-3416/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 28/2/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

ವಿಷಯ: ಶ್ರೀ.ನಯನ ತಲ್ವಾರ್, ಪತ್ರಿಕಾ ಪ್ರತಿನಿಧಿ, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ, ಇವರು ಸಲ್ಲಿಸಿರುವ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ವರದಿಯನ್ವಯ ಕ್ರಮ ಕೈಗೊಳ್ಳುವ ಬಗ್ಗೆ.

******

1. ಶ್ರೀ.ನಯನ ತಲ್ವಾರ್, ಪತ್ರಿಕಾ ಪ್ರತಿನಿಧಿ, ತಾಲ್ಲೂಕು ಪಂಚಾಯತ್ ಕಾಂಪ್ಲೆಕ್ಸ್, ಕೆ.ಎಂ.ರೋಡ್, ಮೂಡಿಗೆರೆ, ಚಿಕ್ಕಮಗಳೂರು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಆರ್.ಶಿವಣ್ಣ, ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ಉಪ ವಿಭಾಗ, ಚಿಕ್ಕಮಗಳೂರು, (2) ಶ್ರೀ.ಎನ್.ಎಸ್.ರವೀಂದ್ರ, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪ, ಚಿಕ್ಕಮಗಳೂರು, ಮತ್ತು (3) ಶ್ರೀ.ಎಂ.ಸುನೀಲ್, ಸಹಾಯಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪ, ಚಿಕ್ಕಮಗಳೂರು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರ 27 ವಿರಾಜಪೇಟೆ-ಬೈಲೂರು ರಸ್ತೆಯ ಸರಪಳಿ 240.40 ಕಿ.ಮೀ.ನಿಂದ 285.50 ಕಿ.ಮೀ.ವರೆಗೆ ರಸ್ತೆಗೆ ಅಭಿವೃದ್ಧಿ ಕಾಮಗಾರಿಯು ಅತ್ಯಂತ ಕಳಪೆ ಮಟ್ಟದಿಂದ ಕೂಡಿರುತ್ತದೆ. ಸದರಿ ಕಾಮಗಾರಿಗೆ ಬಿಡುಗಡೆಯಾದ ಹಣ ದುರುಪಯೋಗವಾಗಿರುತ್ತದೆ ಎಂದು ಆಪಾದಿಸಿ ದೂರುದಾರರು ಈ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ನೀಡುವಂತೆ ಕಾರ್ಯಪಾಲಕ ಅಭಿಯಂತರರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ದೂರು ಅರ್ಜಿಗೆ ಸಂಬಂಧಿಸಿದಂತೆ ಈಗಾಗಲೇ ಪೂರ್ಣಗೊಂಡಿರುವ ಕಾಮಗಾರಿಯನ್ನು ವಿಶಿಷ್ಟ ವಿವರಣೆಗೆ ತಕ್ಕಂತೆ ಪಿ.ಎಂ.ಸಿ.ರವರ ಉಸ್ತುವಾರಿಯಲ್ಲಿ ಉತ್ತಮ ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಲಾಗಿದ್ದು, ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ ಹಾಗೂ

ಸಾರ್ವಜನಿಕರು ರಸ್ತೆಯನ್ನು ಸಂಚಾರಕ್ಕಾಗಿ ಉಪಯೋಗಿಸುತ್ತಿದ್ದು, ರಸ್ತೆಯು ಸುಸ್ಥಿತಿಯಲ್ಲಿರುತ್ತದೆ. ಕೊಪ್ಪ ಉಪ ವಿಭಾಗ ಕಾರ್ಯವ್ಯಾಪ್ತಿಯಲ್ಲಿನ ರಸ್ತೆ ಅಭಿವೃದ್ಧಿಗೆ ರೂ.1257.00 ಲಕ್ಷಗಳು ಮಾತ್ರ ಲಭ್ಯವಿದ್ದು, ಅರ್ಜಿದಾರರು ದೂರಿನಲ್ಲಿ ತಿಳಿಸಿರುವಂತೆ ರೂ.2300.00 ಲಕ್ಷಗಳಾಗಿರುವುದಿಲ್ಲ. ಸದರಿ ಕಾಮಗಾರಿಯನ್ನು ದಿ.21/9/15 ರಂದು ಪರಿವೀಕ್ಷಣೆ ನಡೆಸಿದ್ದು, ಕಾಮಗಾರಿಯು ವಿಶಿಷ್ಟ ನಿರ್ವಹಣೆಗೆ ತಕ್ಕಂತೆ ಉತ್ತಮ ಗುಣಮಟ್ಟದ ಕಾಮಗಾರಿಯನ್ನು ನಿರ್ವಹಿಸಿದ್ದು, ಕಾಮಗಾರಿಯು ಕಳಪೆಯಾಗಿರುವುದಿಲ್ಲವೆಂದು ಮತ್ತು ಆರೋಪವು ನಿರಾಧಾರವಾಗಿರುತ್ತದೆಯೆಂದು ತಿಳಿಸಿರುತ್ತಾರೆ.

4. ಕಾರ್ಯಪಾಲಕ ಅಭಿಯಂತರರ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿ, ಪ್ರತ್ಯುತ್ತರವನ್ನು ಅಲ್ಲಗಳೆದಿರುತ್ತಾರೆ.

5. ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿ ಸಲ್ಲಿಸುವಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು. ಪೊಲೀಸ್ ಉಪಾಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

"ಈ ಅರ್ಜಿಯ ವಿಚಾರಣೆಯಿಂದ ತಿಳಿದುಬಂದ ಅಂಶವೇನೆಂದರೆ, ಕೊಪ್ಪ ಉಪ ವಿಭಾಗದ ಕಾರ್ಯವ್ಯಾಪ್ತಿಗೆ ಒಳಪಡುವ ವಿರಾಜಪೇಟೆ–ಬೈಂದೂರು–27, ರಸ್ತೆ ಕಿ.ಮೀ.233.67 ರಿಂದ 285.50 ರ (ಆಯ್ದ ಭಾಗಗಳಲ್ಲಿ ಪ್ಯಾಕೇಜ್–128 ಎ) ಅಭಿವೃದ್ಧಿ ಪಡಿಸುವ ಕಾಮಗಾರಿಯ ಮೊತ್ತ ರೂ.1257.00 ಲಕ್ಷಗಳಾಗಿದ್ದು, ಮಂಜೂರಾದ ಅಂದಾಜಿನಲ್ಲಿ 1.30 ಕಿ.ಮೀ. ಕಾಂಕ್ರೀಟ್ ರಸ್ತೆ, 13.00 ಕಿ.ಮೀ. Strenthening ಹಾಗೂ 8.00 ಕಿ.ಮೀ. Resurfacing ಕೆಲಸವು ಒಳಗೊಂಡಿರುತ್ತದೆ. ಅದರಂತೆ project management Consultant ರವರ ಉಸ್ತುವಾರಿಯಲ್ಲಿ 13.00 ಕಿ.ಮೀ. Strenthening, 8.00 ಕಿ.ಮೀ. Resurfacing ಮತ್ತು 1.30 ಕಿ.ಮೀ. ಕಾಂಕ್ರೀಟ್ ರಸ್ತೆ ಪೂರ್ಣಗೊಂಡಿರುತ್ತದೆ. ಅಂದಾಜಿನಲ್ಲಿ ಉಳಿಕೆ ಕೆಲಸಗಳು ಪ್ರಗತಿಯಲ್ಲಿರುತ್ತದೆ. ಪೂರ್ಣಗೊಂಡಿರುವ ಕಾಮಗಾರಿಯನ್ನು ವಿಶಿಷ್ಟ ವಿವರಣೆಗೆ ತಕ್ಕಂತೆ project management Consultant ರವರ ಉಸ್ತುವಾರಿಯಲ್ಲಿ ಉತ್ತಮ ಗುಣಮಟ್ಟದಲ್ಲಿ ನಿರ್ವಹಿಸಲಾಗಿದ್ದು, ಚಿಕ್ಕಮಗಳೂರು ಉಪ ವಿಭಾಗ ಕಾರ್ಯವ್ಯಾಪ್ತಿಯಲ್ಲಿನ ರಸ್ತೆ ಅಭಿವೃದ್ಧಿಗೆ ರೂ.1257.00 ಲಕ್ಷಗಳು ಮಾತ್ರ ಲಭ್ಯವಿದ್ದು, ಅರ್ಜಿದಾರರು ದೂರಿನಲ್ಲಿ ತಿಳಿಸಿರುವಂತೆ 2300.00 ಲಕ್ಷಗಳಾಗಿರುವುದಿಲ್ಲ. ಕಾಮಗಾರಿಯು ಗುಣ ಭರವಸೆ ಪರೀಕ್ಷೆಯ ವರದಿಯ ಆಧಾರದ ಮೇಲೆ ಕಳಪೆಯಾಗಿರುವುದಿಲ್ಲವೆಂದು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ವಿಭಾಗ, ಚಿಕ್ಕಮಗಳೂರು ರವರ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಗುಣ ಭರವಸೆ ಉಪ ವಿಭಾಗ ಹಾಸನ ರವರುಗಳು ತಿಳಿಸಿದ್ದರೂ ಸಹ ನನ್ನ ಅಭಿಪ್ರಾಯದಂತೆ ಮರು ಡಾಂಬರೀಕರಣ (Re surfacing) ಅಥವಾ semi dence bituminous concreate ಪದರದ ಅವಶ್ಯಕತೆ ಇದೆ" ಎಂದು ಅಭಿಪ್ರಾಯ ನೀಡಿರುತ್ತಾರೆ.

6. ತನಿಖಾಧಿಕಾರಿಯ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ 23 ಕೋಟಿ ರೂಪಾಯಿಗಳಲ್ಲಿ ಕೊಪ್ಪ ಉಪ ವಿಭಾಗದ ವ್ಯಾಪ್ತಿಗೊಳಪಟ್ಟ ವಿರಾಜಪೇಟೆ ಬೆಂಗಳೂರು ರಸ್ತೆ ಅಭಿವೃದ್ಧಿಗೆ ಸುಮಾರು 10 ಕೋಟಿ ರೂಪಾಯಿಗಳು ವೆಚ್ಚವಾಗಿರುತ್ತದೆ. ಈ ಹಣದಲ್ಲಿ ಗುಣಮಟ್ಟದ ಕಾಮಗಾರಿ ನಡೆಸದೆ ಕಳಪೆ ಕಾಮಗಾರಿಯಾಗಿರುವುದು ಕಂಡುಬರುತ್ತದೆ. ಜಯಪುರದಿಂದ ಸುಮಾರು 11 ಕಿ.ಮೀ. ಸಂಚರಿಸಿದರೆ ಗಡಿಕಲ್ ಎಂಬ ಗ್ರಾಮವಿದ್ದು, ಅಲ್ಲಿಂದ ಮುಂದುವರೆದು ಶೃಂಗೇರಿ ತಾಲ್ಲೂಕಿನ ಕುಂಚೇಬೈಲ್ ಗ್ರಾಮದವರೆಗೆ ರಸ್ತೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿ ಪಡಿಸಿರುವುದಿಲ್ಲ, ಭಾರಿ ತಿರುವುಗಳಿವೆ. ಇಲಾಖೆಯ ಸಿಬ್ಬಂದಿಗಳ ನಿರ್ಲಕ್ಷ್ಯದಿಂದ ಅಪಘಾತಕ್ಕೆ ಅವಕಾಶವಾಗುವ ರೀತಿಯಲ್ಲಿ ರಸ್ತೆ ನಿರ್ಮಾಣವಾಗಿದೆ. ಹಾಗೂ ಅನೇಕ ಲೋಪದೋಷಗಳಿಂದ ರಸ್ತೆ ಕಾಮಗಾರಿಯನ್ನು ನಿರ್ವಹಿಸಲಾಗಿದೆ. ಆದ್ದರಿಂದ, ಬೇರೆ ಇಲಾಖೆಯವರಿಂದ ಕಾಮಗಾರಿಯ ಗುಣಮಟ್ಟದ ಬಗ್ಗೆ ತಪಾಸಣೆ ನಡೆಸಬೇಕೆಂದು ಕೋರಿರುತ್ತಾರೆ.

7. ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಕಾಮಗಾರಿಯ ಗುಣಮಟ್ಟ ಕಳಪೆಯಾಗಿರುವುದಿಲ್ಲವೆಂದು ತಿಳಿಸಿದ್ದರೂ ಸಹ ಮರು ಡಾಂಬರೀಕರಣದ ಅಗತ್ಯ ಇದೆಯೆಂದು ತನಿಖಾಧಿಕಾರಿ ವರದಿಯಲ್ಲಿ ತಿಳಿಸಿರುವುದರಿಂದ, ಕಾಮಗಾರಿಯ ನಿರ್ವಹಣಾ ಅವಧಿ ಯಾವ ಸಾಲಿನವರೆಗೆ ಇದೆ ಮತ್ತು ನಿರ್ವಹಣಾ ಅವಧಿ ಮುಗಿಯದೇ ಇದ್ದ ಪಕ್ಷದಲ್ಲಿ ಮರು ಡಾಂಬರೀಕರಣ ಅಥವಾ ಸೆಮಿ ಡೆನ್ಸ್ ಬಿಟುಮಿನಸ್ ಕಾಂಕ್ರಿಟ್ ಪದರವನ್ನು ಹಾಕುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

8. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ಇವರು ವರದಿಯನ್ನು ಸಲ್ಲಿಸಿದ್ದು, ವರದಿಯಲ್ಲಿ ವಿರಾಜಪೇಟೆ–ಬೈಂದೂರು ರಾಜ್ಯ ಹೆದ್ದಾರಿ 27 ರ ಕಿ.ಮೀ. 240.400 ಇಂದ 285/500 ರ ಆಯ್ದ ಭಾಗಗಳಲ್ಲಿ ಅಭಿವೃದ್ಧಿ ಪಡಿಸುವ ಕಾಮಗಾರಿ ಪ್ಯಾಕೇಜ್ 128(1) ಬಗ್ಗೆ ಯಾಗಿದ್ದು, ಕೊಪ್ಪ ಲೋಕೋಪಯೋಗಿ ಉಪ ವಿಭಾಗಕ್ಕೆ ಅಂದಾಜು 1257.00 ಲಕ್ಷಗಳಾಗಿರುತ್ತವೆ. ಸದರಿ ಕಾಮಗಾರಿ ಮುಖ್ಯ ಯೋಜನಾಧಿಕಾರಿ, ರಾಜ್ಯ ಹೆದ್ದಾರಿ ಅಭಿವೃದ್ಧಿ, ಯೋಜನೆ ಅನುಷ್ಠಾನ ಘಟಕ ಬೆಂಗಳೂರು ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಗುತ್ತಿಗೆದಾರರನ್ನು ನೇಮಕ ಮಾಡಿರುತ್ತಾರೆ. ಗುತ್ತಿಗೆ ಕರಾರು ಸಂ.23/13–14 ದಿ.21/12/14 ರಂತೆ ಮೆ:ಇಕ್ಬಾಲ್ ಅಹಮದ್ ಇನ್ಫ್ರಾ ಪ್ರಾಜೆಕ್ಟ್ ಪ್ರೈ.ಲಿ. ಮಂಗಳೂರು ಇವರಿಗೆ ಮೇಲಿನ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ವಹಿಸಿಕೊಟ್ಟಿರುತ್ತಾರೆ. ಸದರಿ ಕಾಮಗಾರಿಯ ಗುತ್ತಿಗೆದಾರರು ಇನ್ನು ಕಾಮಗಾರಿಯಲ್ಲಿನ ಹಲವಾರು ಅಂಶಗಳನ್ನು ನಿರ್ವಹಿಸಬೇಕಾಗಿದ್ದು, ಇನ್ನು ಅಂತಿಮ ಬಿಲ್ ಪಾವತಿಸಿರುವುದಿಲ್ಲ. ಸದರಿ ಗುತ್ತಿಗೆಯು ಚಾಲ್ತಿಯಲ್ಲಿದ್ದು, ನಿರ್ವಹಿಸಬೇಕಾದ ಅಂಶಗಳು ಮುಗಿದ ನಂತರ ಅಂತಿಮ ಬಿಲ್ ಸಲ್ಲಿಸಲಾಗುವುದು. ತದನಂತರ ಆ ದಿನಾಂಕದಿಂದ 2 ವರ್ಷಗಳ ಅವಧಿಯವರೆಗೆ ಕಾಮಗಾರಿಯ ನಿರ್ವಹಣಾ ಅವಧಿಯು ಇರುವುದರಿಂದ ಕಾಮಗಾರಿಯಲ್ಲಿ ಲೋಪದೋಷ ಕಂಡುಬಂದಲ್ಲಿ ಸದರಿ ಗುತ್ತಿಗೆದಾರರ ಭದ್ರತಾ

ತೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ಸದರಿಯವರಿಂದ ಕಾಮಗಾರಿಯನ್ನು ನಿರ್ವಹಿಸಲಾಗುವುದೆಂದು ವರದಿ ನೀಡಿರುತ್ತಾರೆ.

9. ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಚಿಕ್ಕಮಗಳೂರು ವಿಭಾಗ, ಇವರು ವರದಿಯ ಜೊತೆ ನೀಡಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ದಿ.27/12/13 ರಂದು ಗುತ್ತಿಗೆದಾರರಿಗೆ ಕಾಮಗಾರಿಯನ್ನು ಪ್ರಾರಂಭಿಸುವಂತೆ ನೋಟೀಸು ನೀಡಿರುವುದು ಕಂಡುಬರುತ್ತದೆ. ಇನ್ನೊಂದು ದಾಖಲಾತಿಯನ್ನು ಪರಿಶೀಲಿಸಿದಾಗ, ಕಾಮಗಾರಿಯನ್ನು ಪೂರ್ಣಗೊಳಿಸಲು 11 ತಿಂಗಳ ಕಾಲಾವಕಾಶ ನೀಡಿರುವುದು ಕಂಡುಬರುತ್ತದೆ. ಆದರೆ ಕಾರ್ಯಪಾಲಕ ಇಂಜಿನಿಯರ್‌ರವರ ವರದಿಯಲ್ಲಿ ಕಾಮಗಾರಿಯ ಗುತ್ತಿಗೆದಾರರು ಇನ್ನೂ ಕಾಮಗಾರಿಯಲ್ಲಿನ ಹಲವಾರು ಅಂಶಗಳನ್ನು ನಿರ್ವಹಿಸಬೇಕಾಗಿರುತ್ತದೆ ಎಂದು ಹೇಳಿರುವುದು ಕಂಡುಬರುತ್ತದೆ. ಅದನ್ನು ಗಮನಿಸಿದಾಗ, ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಪೂರ್ಣಗೊಂಡ ಕಾಮಗಾರಿಯ ಬಗ್ಗೆ ಪೊಲೀಸ್ ಅಧೀಕ್ಷಕರು ತನ್ನ ವರದಿಯಲ್ಲಿ ಮರು ಡಾಂಬರೀಕರಣ ಅಥವಾ ಸೆಮಿ ಡೆನ್ಸ್ ಬಿಟುಮಿನಸ್ ಕಾಂಕ್ರೀಟ್ ಪದರದ ಅವಶ್ಯಕತೆಯಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

10. ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಾಮಗಾರಿ ನಿಗದಿತ ಸಮಯದಲ್ಲಿ ಪೂರ್ಣಗೊಂಡಿರದಿರುವ ಕಾರಣ ಗುತ್ತಿಗೆದಾರರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಮತ್ತು ಕಾಮಗಾರಿ ಪೂರ್ಣಗೊಂಡ ನಂತರ 2 ವರ್ಷಗಳ ಅವಧಿಯವರೆಗೆ ಕಾಮಗಾರಿಯ ನಿರ್ವಹಣಾ ಅವಧಿ ಇರುವುದರಿಂದ, ರಸ್ತೆಯ ಮೇಲ್ಪದರ ಶಿಥಿಲಗೊಂಡಿರುವ ಸ್ಥಳಗಳಲ್ಲಿ ಮರು ಡಾಂಬರೀಕರಣ ಅಥವಾ ಸೆಮಿ ಡೆನ್ಸ್ ಬಿಟುಮಿನಸ್ ಕಾಂಕ್ರೀಟ್ ಪದರವನ್ನು ಹಾಕಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ **ಒಂದು ತಿಂಗಳೊಳಗೆ** ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/2/18

**(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**